# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ-190,

# ಮಂಗಮ್ಮನಪಾಳ್ಯ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

ಮಾನ್ಯ ನೋಡಲ್ ಅಧಿಕಾರಿ/ಸ.ಕಾ.ನಿ.ಅ. (ಹೆಚ್.ಎಸ್.ಆರ್ ಉಪವಿಭಾಗ) ರವರು ದಿನಾಂಕ: 21.12.2020 ರಂದು ಬೆಳಿಗ್ಗೆ 11.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು 190-ಮಂಗಮ್ಮನಪಾಳ್ಯ, ವಾರ್ಡ್ ಕಛೇರಿ (ಹೆಚ್.ಎಸ್.ಆರ್ ಉಪವಿಭಾಗ) ರಲ್ಲಿ ನಡೆಸಿದ್ದ, ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಸಬೆಯಲ್ಲಿ ಹಾಜರಿದ್ದ ಸದಸ್ಯರು/ಅಧಿಕಾರಿಗಳು**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ |
|---|---|---|
| 1 | ಶ್ರೀ ಟಿ. ಹನುಮಂತರಾಯ | ಅಧ್ಯಕರು/ ನೋಡಲ್ ಅಧಿಕಾರಿಗಳು |
| 2 | ಶ್ರೀ ರವಿ ಡಿ | ಸಂಚಾಲಕರು/ ಕಾರ್ಯದರ್ಶಿಗಳು |
| 3 | ಶ್ರೀಮತಿ ಲಕ್ಷ್ಮೀ ಬಿ | ಸ.ಕಂ.ಅ ಹೆಚ್.ಎಸ್.ಆರ್ ಉಪವಿಭಾಗ |
| 4 | ಶ್ರೀ ಸಾಯಬಣ್ಣ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 5 | ಶ್ರೀ ಡಿ. ವಿಜಯಕುಮಾರ್ | ಕಿರಿಯ ಅಭಿಯಂತರರು, ಬೆಸ್ಕಾಂ |
| 6 | ಶ್ರೀ ರಮೇಶ್ ಡಿ | ಕಿ.ಅ. ವಿದ್ಯುತ್ ವಿಭಾಗ |
| 7 | ಶ್ರೀ ನರಸಪ್ಪ ಹೆಚ್. | ತೋಟಗಾರಿಕೆ ನಿರ್ವಹಣೆ ಪರಿವೀಕ್ಷಕರು |
| 8 | ಶ್ರೀ ಹೊನ್ನುರ ಬಾಷ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 9 | ಶ್ರೀ ನಾಗೇಂದ್ರ | ಸದಸ್ಯರು |
| 10 | ಶ್ರೀ ಶ್ರೀನಿವಾಸ ರೆಡ್ಡಿ | ಸದಸ್ಯರು |
| 11 | ಶ್ರೀ ಸುರೇಶ್ ರೆಡ್ಡಿ | ಸದಸ್ಯರು |
| 12 | ಶ್ರೀ ಉಮೇಶ್ ಎಸ್. | ಸದಸ್ಯರು |
| 13 | ಶ್ರೀ ಗೋಪಿನಾಥ | ಸದಸ್ಯರು |
| 14 | ಶ್ರೀ ಶಂಕರ ಎನ್ | ಸದಸ್ಯರು |
| 15 | ಶ್ರೀ ಚಂದ್ರ ರೆಡ್ಡಿ | ಸದಸ್ಯರು |

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯಾದ ಶ್ರೀ ಟಿ ಹನುಮಂತರಾಯ ರವರು ಸಭೆಗೆ ಆಗಮಿಸಿದ ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು, ಅಧ್ಯಕ್ಷರು ವಾರ್ಡ್ ಸಭೆಗೆ ಹಾಜರಾಗಿದ್ದ ಸದಸ್ಯರಿಗೆ ಮತ್ತು ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಪ್ರಸ್ತಾಪಿಸಲು ಕೋರಿದರು.

ಹಿಂದಿನ ಸಭಾ ನಡುವಾಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಿ ಇಂಜಿಯರಿಂಗ್, ಘನತ್ಯಾಜ್ಯ ನಿರ್ವಹಣೆ ಮತ್ತು ಕೋವಿಡ್-19 ತಂಡಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿ ಸುಧಾರಣೆ ತಂದಿರುವುದನ್ನು ಗಮನಿಸಿದ್ದು, ಇನ್ನು ಉತ್ತಮ ರೀತಿಯಲ್ಲಿ ಮುಂದುವರೆಸಲು ನೋಡಲ್ ಅಧಿಕಾರಿ ರವರು ತಿಳಿಸಿದರು.

Scanned with Car

| ಕ್ರ ಸಂ | ಇಲಾಖೆ | ವಿಷಯ |
|---|---|---|
| 1 | ಬಿ.ಬಿ.ಎಂ.ಪಿ (ವಿದ್ಯುತ್) | ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿ[illegible]ರುವ ವಿಷಯಗಳ ಬಗ್ಗೆ, ಇಂದಿನ ಸಭೆಯಲ್ಲಿ ಸ.ಅ. ವಿದ್ಯುತ್ ರವರು ಬೀದಿ ದೀಪಗಳನ್ನು ಆನ್/ಆಫ್ ಮಾಡುವ ಸ್ವೀಚ್ ಅಳವಡಿಸಲು ಪ್ರಸ್ತುತ ಗ್ಲೋಬಲ್ ಟೆಂಡರ್ ಪ್ರಗತಿಯಲ್ಲಿದ್ದು, ಅನುಮೋದನೆಗೊಂಡ ನಂತರ ಕ್ರಮ ವಹಿಸಲಾಗುವುದೆಂದು ಸಭೆಯಲ್ಲಿ ತಿಳಿಸಿರುತ್ತಾರೆ.<br>ಈ ಬಗ್ಗೆ ಸ.ಅ. ವಿದ್ಯುತ್ ರವರಿಗೆ ಕ್ರಮ ವಹಿಸುವಂತೆ ಅಧ್ಯಕ್ಷರು ತಿಳಿಸಿರುತ್ತಾರೆ.<br>**ಕ್ರಮ : ಸ.ಅ. ವಿದ್ಯುತ್** |
| 2 | ಆರೋಗ್ಯ ಇಲಾಖೆ | ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ, ಇಂದಿನ ಸಭೆಯಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರ ಪರವಾಗಿ ಕಿರಿಯ ಆರೋಗ್ಯ ಪರಿವೀಕ್ಷಕರು ವ್ಯಾಪ್ತಿಯಲ್ಲಿ ಪ್ರತಿ ನಿತ್ಯ ಸೊಳ್ಳೆ ಔಷದಿ ಸಿಂಪಡಿಸುತ್ತಿದ್ದು, ಕ್ರಮ ವಹಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ಐ.ಟಿ.ಐ ಬಡಾವಣೆಯಲ್ಲಿ ಸೊಳ್ಳೆ ಔಷದಿ ಸಿಂಪಡಿಸಲು ಸದಸ್ಯರಾದ ಶ್ರೀ ಗೋಪಿನಾಥ ರವರು ಕೋರಿರುತ್ತಾರೆ. ಈ ಬಗ್ಗೆ ಕ್ರಮ ವಹಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯಲ್ಲಿ ಹಸಿ-ಒಣ ಕಸಕ್ಕೆ ಬೆಂಕಿ ಹಾಕುತ್ತಿದ್ದು, ಸಾರ್ವಜನಿಕರಿಗೆ/ ಸ್ಥಳೀಯರಾದ ಹಿರಿಯ ನಾಗರೀಕರು ಮತ್ತು ಮಕ್ಕಳಿಗೆ ಸಾಂಕ್ರಾಮಿಕ ರೋಗ್ಯ ಉಲ್ಬಣಗೊಳ್ಳುವ ಸಾಧ್ಯತೆಗಳಿದ್ದು, ಹಾಗೂ ಕೆ.ಸಿ.ಡಿಸಿ ಸುತ್ತಮುತ್ತಲಿನಲ್ಲಿ ದುರ್ವಾಸನೆ ಬೀರುತ್ತಿದ್ದು, ಔಷದಿ ಸಿಂಪಡಿಸಲು ಸಭೆಯಲ್ಲಿ ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಕ್ರಮ ವಹಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯಲ್ಲಿ ಮಾಂಸದ ಅಂಡಿಗಳಿಗೆ ನೋಟಿಸ್ ಜಾರಿಮಾಡಿದ್ದು, ಅಂಗಡಿ ಮಾಲೀಕರು ಯಾವುದೇ ಕ್ರಮ ವಹಿಸಿರುವುದಿಲ್ಲ ಈ ಬಗ್ಗೆ ಮೊತ್ತೊಮ್ಮೆ ನೋಟಿಸ್ ಜಾರಿ ಮಾಡಿ ಕ್ರಮ ವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ : ಕಿರಿಯ ಆರೋಗ್ಯ ಪರಿವೀಕ್ಷಕರು.** |
| 3 | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಬಗ್ಗೆ ಪ್ರಸ್ತಾಪಿಸಲಾಗಿದ್ದು, ಕ್ರಮ ಕೈಗೊಳ್ಳಲಾಗಿದೆ ಎಂದು ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿರುತ್ತಾರೆ.<br>**ಕ್ರಮ : ಸ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ** |
| 4 | ಬೆಸ್ಕಾಂ ಇಲಾಖೆ | ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಬಗ್ಗೆ ಪ್ರಸ್ತಾಪಿಸಲಾಗಿದ್ದು, ಕ್ರಮ ಕೈಗೊಳ್ಳಲಾಗುವುದೆಂದು ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿರುತ್ತಾರೆ.<br>**ಕ್ರಮ : ಸಹಾಯಕ ಅಭಿಯಂತರರು, ಬೆಸ್ಕಾಂ.** |
| 5 | ತೋಟಗಾರಿಕೆ ಇಲಾಖೆ. | • ವಾರ್ಡ್ ವ್ಯಾಪ್ತಿಯ ಐ.ಟಿ.ಐ ಬಡಾವಣೆಯ ಉದ್ಯಾನವನವನ್ನು ನಿರ್ವಹಿಸಲು ಹಾಗೂ ಸ್ವಚ್ಛಗೊಳಿಸಿ ಸಾರ್ವಜನಿಕರಿಗೆ, ಹಿರಿಯ ನಾಗರೀಕರಿಗೆ ಓಡಾಡು ಅನವು ಮಾಡಿಕೊಡಲು ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಕ್ರಮ ವಹಿಸಲು ತೋಟಗಾರಿಕೆ ನಿರ್ವಹಣೆ ಪರಿವೀಕ್ಷಕರಿಗೆ |

Scanned with Car

| | | |
|---|---|---|
| | | ಅಧ್ಯಕ್ಷರು ಸೂಚಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯಲ್ಲಿ ಸಹ ಕಂದಾಯ ಅಧಿಕಾರಿ ಹೆಚ್.ಎಸ್.ಆರ್ ಉಪವಿಭಾಗ/ತೋಟಗಾರಿಕೆ ಅಧಿಕಾರಿಗಳು, ಪೋಲಿಸ್ ಸಿಬ್ಬಂದಿ ಮತ್ತು ವಾರ್ಡ್ ಸಮಿತಿ ಸದಸ್ಯರ ಸಹಕಾರದೊಂದಿಗೆ ಪ್ರತಿ ಮನೆಗೆ ಒಂದು ಗಿಡವನ್ನು ನೀಡಿ ಅರಿವು ಮೂಡಿಸಲು ವಾರ್ಡ್ ಸಭೆಯ ಗಮನಕ್ಕೆ ಸದಸ್ಯರು ತಂದಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟವರಿಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>• ಕ್ರಮ ತೋಟಗಾರಿಕೆ ನಿರ್ವಹಣೆ ಪರಿವೀಕ್ಷಕರು |
| 6 | ಕಂದಾಯ ವಿಭಾಗ | • ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ಆರೋಗ್ಯ ಪ್ರಾಥಮಿಕ ಕೇಂದ್ರವನ್ನು ಸ್ಥಾಪಿಸಲು ಹೊಸಪಾಳ್ಯ ಬಸ್ ನಿಲ್ದಾಣ ಹತ್ತಿರ ಜಾಗ ಲಭ್ಯವಿದ್ದು, ಈ ಬಗ್ಗೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ವಾರ್ಡ್ ಸಭೆಯ ಗಮನಕ್ಕೆ ಸದಸ್ಯರು ತಂದಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟವರಿಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>• ಕ್ರಮ : ಸಹಾಯಕ ಕಂದಾಯ ಅಧಿಕಾರಿ |
| 7 | ಕಾಮಗಾರಿ | ವಾರ್ಡ್ ವ್ಯಾಪ್ತಿಯಲ್ಲಿ ಮಳೆ ನೀರು ಚರಂಡಿಗಳಲ್ಲಿ ಹೋಳೆತ್ತುತ್ತಿದ್ದು, ಆದರೆ ಸ್ಥಳದಲ್ಲಿ ಶೇಖರಣೆ ಮಾಡುತ್ತಿದ್ದು, ಇದನ್ನು ಸಾಗಿಸುವಂತೆ ಸಭೆಯಲ್ಲಿ ಸದಸ್ಯರು ಕೋರಿರುತ್ತಾರೆ.<br>• ವಾಡ್ ವ್ಯಾಪ್ತಿಯಲ್ಲಿ ಕಲ್ವರ್ಟ ನಿರ್ಮಿಸುವಂತೆ ಸದಸ್ಯರು ಕೋರಿರುತ್ತಾರೆ.<br>• ಮುನೇಶ್ವರ ಬಡಾವಣೆಯ ಚರಂಡಿಯಲ್ಲಿ ಮಳೆ ನೀರು ಸರಗಾವಾಗಿ ಹರಿಯದೆ ರಸ್ತೆಯ ಮೇಲ್ಭಾಗದಲ್ಲಿ ಹರಿಯುತ್ತಿದ್ದು, ಈ ಬಗ್ಗೆ ಕ್ರಮ ವಹಿಸುವಂತೆ ಸದಸ್ಯರು ಕೋರಿರುತ್ತಾರೆ.<br>• ಐ.ಟಿ.ಐ ಬಡಾವಣೆಯ ಉದ್ಯಾನವನದ ರಸ್ತೆ ಬದಿಯಲ್ಲಿ ಚರಂಡಿ ನಿರ್ಮಿಸುವಂತೆ ಸದಸ್ಯರು ಕೋರಿರುತ್ತಾರೆ.<br>ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸಹಾಯಕ ಅಭಿಯಂತರರಿಗೆ ಸೂಚಿಸಿರುತ್ತಾರೆ.<br>ಕ್ರಮ: ಸ.ಅ. ವಾರ್ಡ್ ನಂ. 190. |

ಈ ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ವಾರ್ಡ್ ನಂ. 190

ಅಧ್ಯಕ್ಷರು/ ~~ನೋಡಲ್ ಅಧಿಕಾರಿಗಳು~~
ವಾರ್ಡ್ ನಂ. 190

**ಪ್ರತಿಯನ್ನು:-**

1. ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು(ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
3. ವಾರ್ಡ್ ಸಮಿತಿಯ ಅಧ್ಯಕ್ಷಕರ ಮಾಹಿತಿಗಾಗಿ ಸಲ್ಲಿಸಿದೆ.
4. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.
5. ಕಛೇರಿ ಪ್ರತಿ.

Scanned with Ca